ದಿನಾಂಕಃ 04.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನಾನು ಖಾಸಗಿ ಕಂಪನಿಯಲ್ಲಿ ಕೆಲಸಮಾಡುತ್ತಿದ್ದೇನೆ. ನಾನು SSLC ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಸ್ವತ್ತು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ದಾವಾ ಸ್ವತ್ತು ನಮ್ಮ ತಾತ ರಾಮಣ್ಣರವರಿಗೆ ಮಂಜೂರಾಗಿದೆ ಎಂದರೆ ಸರಿ. ಅವರ ಜೀವಿತ ಅವಧಿಯಲ್ಲಿ ದಾವಾ ಸ್ವತ್ತಿನ ಸ್ವಾ ಧೀನದಲ್ಲಿದ್ದರು ಎಂದರೆ ಸರಿ. ಅವರ ಮರಣದ ನಂತರ ಅವರ ಮಕ್ಕಳಾದ ಗುರುಮೂರ್ತಿ, ಮಹಲಿಂಗಪ್ಪ ಮತ್ತು ನಮ್ಮ ಅಜ್ಜಿ ಅವರ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸರಿ. ನಾನು ಸಿಡಿಯಜ್ಜನಪಾಳ್ಯದಲ್ಲಿ ವಾಸವಾಗಿದ್ದೇನೆ. ಈ ಬಗ್ಗೆ ನನ್ನ ದಾವೆಯಲ್ಲಿ ತಿಳಿಸಿರುತ್ತೇನೆ. ಸಿಡಿಯಜ್ಜನಪಾಳ್ಯದಿಂದ ದಾವಾ ಸ್ವತ್ತು 1ಕಿ ಮೀ ಗಿಂತ ಕಡಿಮೆ ದೂರದಲ್ಲಿರುತ್ತದೆ. ಸಿಡಿಯಜ್ಜನಪಾಳ್ಯದಿಂದ ಕಾಮಗೊಂಡನಹಳ್ಳಿಗೆ ಅರ್ಧ ಕಿ ಮೀ ದೂರ ಎಂದರೆ ಸರಿ. ನನ್ನ ಜನ್ಮ ದಿನಾಂಕಃ01.06.1984 ಎಂದರೆ ಸರಿ. ನಮ್ಮ ತಂದೆ ಮತ್ತು ಮಹಲಿಂಗಪ್ಪರವರು ಮೊದಲು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿ. ಅವರು ಅನ್ಯೂನ್ಯವಾಗಿದ್ದರು ಎಂದರೆ ಸರಿ. ಎಲ್ಲರೂ ತೀರ್ಮಾನ ಮಾಡಿಕೊಂಡು ವ್ಯವಹಾರ ಮಾಡುತ್ತಿದರು ಎಂದರೆ ಸರಿ. 9ನೇ ಪ್ರತಿವಾದಿಯ ಗಂಡ ಬೀರಯ್ಯ ನನಗೆ ಪರಿಚಯ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡಲು ಬೀರಯ್ಯರವರೊದಿಗೆ ಮಾತುಕತೆಮಾಡಿದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ದಿಃ14.09.2009 ರಂದು ನಮ್ಮ ತಂದೆ ಚಿಕ್ಕಪ್ಪ ಹಾಗೂ ನಮ್ಮ ಅಜ್ಜಿ ಸಾಕಮ್ಮ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇವೆ ಎಂದರೆ ಸರಿ. ನನ್ನ ಕುಟುಂಬದ ತಾಪತ್ರಯಗೋಸ್ಕರ ನಮ್ಮ ತಂದೆ ಚಿಕ್ಕಪ್ಪ ಹಾಗೂ ನಮ್ಮ ಅಜ್ಜಿ ಸಾಕಮ್ಮ ದಾವಾ ಸ್ವತ್ತನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 2009-10 ರಲ್ಲಿ ಸದರಿ ಕ್ರಯಪತ್ರದ ಆಧಾರದ ಮೇಲೆ 9ನೇ ಪ್ರತಿವಾದಿಯ ಗಂಡ ಬೀರಯ್ಯ ನವರ ಹೆಸರಿಗೆ ಖಾತೆ ಬದಲಾವಣೆ ಮಾಡಿದ್ದಾರೆ ಎಂದರೆ ಸರಿ. ನಂತರ ಬೀರಯ್ಯ ನವರು ದಾವಾ ಸ್ವತ್ತಿನಲ್ಲಿ ಕಂದಾಯ

ದಾಖಲೆಗಳನ್ನು ಬದಲಾವಣೆ ಮಾಡಿಕೊಂಡು ಸ್ವಾ ದೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಕಂದಾಯ ದಾಖಲೆಗಳ ಬಗ್ಗೆ ಸಾಕ್ಷ್ಯಮ ಪ್ರಾಧಿಕಾರಕ್ಕೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಬೀರಯ್ಯ ನವರ ಮರಣದ ನಂತರ 9ನೇ ಪ್ರತಿವಾದಿಯ ಹೆಸರಿಗೆ ದಾಖಲೆಗಳ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆಗ ನಾನು ತಹಸೀಲ್ದಾರ್ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ತಹಸೀಲ್ದಾರ್ ನ್ಯಾಯಾಲಯದಲ್ಲಿ ಪ್ರಕರಣ ನಡೆದು 9ನೇ ಪ್ರತಿವಾದಿಯ ಹೆಸರಿಗೆ ಖಾತೆ ತೆ ಮಾಡಲು ಆದೇಶ ಆಗಿದ್ದು ಎಂದರೆ ಸರಿ. ಅದರಂತೆ ಕಂದಾಯ ಇಲಾಖೆಯವರು ದಾವಾ ಸ್ವತ್ತಿನ ಖಾತೆಯನ್ನು 9ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಿದ್ದಾರೆ ಎಂದರೆ ಸರಿ. ಸಹಸೀಲ್ದಾರ್ ರವರ ಆದೇಶದ ವಿರುದ್ದ ಸಾಕ್ಷ್ಯಮ ಪ್ರಾಧಿಕಾರಕ್ಕೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. 9ನೇ ಪ್ರತಿವಾದಿಯ ಗಂಡ ನಮ್ಮ ತಂದೆ, ಚಿಕ್ಕಪ್ಪ ಮತ್ತು ನಮ್ಮ ಅಜ್ಜಿಯವರಿಂದ ದಾವಾ ಸ್ವತ್ತನ್ನು ಸದುದ್ದೇಶದಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕ್ರಯದ ವ್ಯವಹಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 9 ರಿಂದ 12 ನೇ ಪ್ರತಿವಾದಿಗಳು ಸದರಿ ಸ್ವತ್ತಿನ ಸ್ವಾ ದೀನದಲ್ಲಿದ್ದಾರೆ ಎಂದರೆ ಸಾಕ್ಷಿಯು 9ನೇ ಪ್ರತಿವಾದಿಯು ಮಾತ್ರ ಸ್ವಾ ದೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಕ್ರಯದ ವ್ಯಾವಹರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2005 ರ ನಂತರ ಜಮೀನುಗಳ ಬೆಲೆ ಜಾಸ್ತಿ ಆಗಿದೆ ಎಂದರೆ ನಮ್ಮ ಊರಿನಲ್ಲಿ ಇಲ್ಲ ಎಂದು ನುಡಿದಿರುತ್ತಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಬೆಲೆ ಹೆಚ್ಚಾಗಿರುವ ಕಾರಣ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಇರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.